1	2	3
20.	ಉದಯಗಿರಿ ಮಳಿಗೆ	1
21.	ರಾಮಕೃಷ್ಣನಗರ ಮಳಿಗೆ	1
22.	ವಿವೇಕಾನಂದ ಮಳಿಗೆ	1
23.	ಎನ್.ಆರ್.ಮೊಹಲ್ಲಾ ಮಳಿಗೆ	1
24.	ಗಾಯಿತ್ರಿಪುರಂ ಮಳಿಗೆ	1
25.	ಹೆಬ್ಬಾಳ್ ಬಡಾವಣೆ ನಗರ ಮಳಿಗೆ	1
26.	ವಿಜಯನಗರ ಮಳಿಗೆ	1
	ಒಟ್ಟು	36
	ನಷ್ಟದಲ್ಲಿರುವ ನಡೆಯುತ್ತಿರುವ ಮಳಿಗೆಗಳ ವಿವರಗಳು	
1.	ಕರ್ಜನ್ ಪಾರ್ಕ್ ಸಿ ಬ್ಲಾಕ್ ಮಳಿಗೆ	1
2.	ಕುವೆಂಪು ನಗರ ಖಾಸಗಿ ಬಾಡಿಗೆ ಮಳಿಗೆ	1
3.	ಗಂಗೋತ್ರಿ ಹುಡ್ಕೋ ಮಳಿಗೆ	1
4.	ವಿ.ವಿ.ಪುರಂ ಖಾಸಗಿ ಬಾಡಿಗೆ ಮಳಿಗೆ	1
5.	ಬಿ.ಇ.ಎಂ.ಎಲ್. ಮಳಿಗೆ	1
	ಒಟ್ಟು	5

ರಾಜ್ಯದಲ್ಲಿ ಬಿ.ಟಿ. ಹತ್ತಿ ತಳಿಯ ಬೀಜಗಳು

792(830) ಶ್ರೀ ಸೋಮಶೇಖರ್. ಬಿ. (ಮಳವಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಹತ್ತಿ ಬೆಳೆ ಬೆಳೆಯಲಾಗುತ್ತಿದೆ; ಎಷ್ಟು ಎಕರೆ ಪ್ರದೇಶದಲ್ಲಿ ಬಿ.ಟಿ.ಹತ್ತಿ ತಳಿಯ ಬೀಜಗಳು ಬೆಳೆಯಲು ಅನುಮತಿ ನೀಡಲಾಗಿದೆ?

ಆ) ಅನುಮತಿ ಕೊಡುವಾಗ ಡಾ।। ದ್ವಾರಕನಾಥ್ ನೇತೃತ್ವದ ಕರ್ನಾಟಕ ಕೃಷಿ ಆಯೋಗ 2000ರ ಅಲ್ಪಕಾಲಿಕ ವರದಿಯಲ್ಲಿ ನೀಡಿರುವ ಶಿಫಾರಸ್ಸುಗಳನ್ನು ಹಾಗೂ ಮುನ್ನೆಚ್ಚರಿಕೆ ಕ್ರಮವನ್ನು ಪಾಲಿಸಲಾಗಿದೆಯೇ?

ಇ) ಈ ಬೀಜವನ್ನು ಮಾನ್‌ಸಂತೋ ಕಂಪನಿಗೆ ಕಿಲೋ ಒಂದಕ್ಕೆ ಸುಮಾರು 4 ಸಾವಿರ ರೂಪಾಯಿಗಳಲ್ಲಿ ಮಾರಾಟ ಮಾಡಲು ಅನುಮತಿ ನೀಡಿದ್ದು, ಇದು ಸಾಧಾರಣಾ ತಳಿ ಹತ್ತಿ ಬೀಜಕ್ಕೆ ಹೋಲಿಸಿದ್ದಲ್ಲಿ ಐದು ಪಟ್ಟು ಹೆಚ್ಚಾಗಿದ್ದು ಈ ಬೆಲೆಯನ್ನು ಯಾವ ಕಾರಣದ ಮೇಲೆ ನಿಗದಿಪಡಿಸಲಾಗಿದೆ.

ಈ) ಈ ತಳಿಯ ಕೃಷಿಯಲ್ಲಿ, ಕೃಷಿ ಇಲಾಖೆಯ, ಪರಿಸರ ಇಲಾಖೆಯ ಮತ್ತು ಕೃಷಿ ವಿಶ್ವವಿದ್ಯಾಲಯಗಳ ಪಾತ್ರವೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಸುಮಾರು 15 ಲಕ್ಷ ಎಕರೆ ಪ್ರದೇಶದಲ್ಲಿ ವಾರ್ಷಿಕವಾಗಿ ಹತ್ತಿ ಬೆಳೆಯಲಾಗುತ್ತಿದೆ. 2002-03ನೇ ಸಾಲಿನ ಪ್ರಾರಂಭದಲ್ಲಿ 16832 ಎಕರೆಗಳ ಕಾರ್ಯಕ್ರಮ

ರೂಪಿಸಿದ್ದು, ನಂತರ 11732 ಎಕರೆ ಪ್ರದೇಶದಲ್ಲಿ ಬಿಟಿ ಹತ್ತಿ ಬೆಳೆಯನ್ನು ಬೆಳೆಯಲು ಕಾರ್ಯಕ್ರಮವನ್ನು ಪರಿಷ್ಕರಿಸಲಾಗಿದೆ.

ಆ) ಬಿ.ಟಿ. ಹತ್ತಿ ಬೆಳೆಯಲು ಕೇಂದ್ರ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯ ಜಿನಿಟಿಕ್ ಎಂಜಿನಿಯರಿಂಗ್ ಅಪ್ರೂವಲ್ ಸಮಿತಿಯು ವಾಣಿಜ್ಯ ಆಧಾರದ ಮೇಲೆ ಬೆಳೆಯಲು ಅನುಮತಿ ನೀಡಲಾಗಿದೆ (ಇದಕ್ಕೆ ಬೇಕಾದ ಮುಂಜಾಗ್ರತೆಯನ್ನು ಅತ್ಯಂತ ಎಚ್ಚರಿಕೆಯಿಂದ ಗಮನಿಸಿ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿದೆ.

ಇ) ಈ ಬೀಜವನ್ನು ಮಹಿಕೊ ಮಾನ್ಸಾಂಟೋ ಕಂಪನಿಯವರು ಪ್ರತಿ ಪ್ಯಾಕಿನಲ್ಲಿ ಒಂದು ಎಕರೆಗೆ ಬೇಕಾದ 400 ಗ್ರಾಂ ಬಿಟಿ ಹತ್ತಿ ಮತ್ತು 120 ಗ್ರಾಂ ಬಿಟಿ ಅಲ್ಲದೆ ಅದೇ ಹತ್ತಿ ಬೀಜಕ್ಕೆ ಒಟ್ಟಾರೆ ರೂ. 1600.00ಗೆ ಮಾರಾಟ ದರ ನಿಗದಿಪಡಿಸಿರುತ್ತಾರೆ. ರಾಜ್ಯದ ಕೃಷಿ ಇಲಾಖೆಯು ದರ ನಿಗದಿ ಮಾಡಿಲ್ಲ. ಈ ಬೆಲೆಯು ರಾಜ್ಯದಲ್ಲಿ ಬೆಳೆಯಲಾಗುತ್ತಿರುವ ಇತರೆ ಹೈಬ್ರಿಡ್ ಹತ್ತಿ ಬಿತ್ತನೆ ಬೀಜಕ್ಕೆ ಹೋಲಿಸಿದಾಗ ಹೆಚ್ಚು ಎಂಬುದು ಸತ್ಯ. ಬೀಜದ ಬೆಲೆಯನ್ನು ಸಂಬಂಧಪಟ್ಟ ಸಂಸ್ಥೆ ನಿಗದಿ ಪಡಿಸಿರುತ್ತದೆ. ಬೆಲೆ ನಿಯಂತ್ರಿಸುವ ಅಧಿಕಾರವಿರುವುದಿಲ್ಲ. ಆದಾಗ್ಯೂ ಈಗ ನಿಗದಿಪಡಿಸಿರುವ ಮಾರಾಟ ದರವನ್ನು ಕಡಿಮೆ ಮಾಡುವಂತೆ ಸಂಬಂಧಿಸಿದ ಸಂಸ್ಥೆಗೆ ಸೂಚಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿರುತ್ತದೆ.

ಈ) ಈ ತಳಿಯ ಕೃಷಿಯಲ್ಲಿ, ಕೃಷಿ ಇಲಾಖೆಯು ತನ್ನ ಸಿಬ್ಬಂದಿಯವರ ಮೂಲಕ ರೈತರಿಗೆ ಕೇಂದ್ರ ಸರ್ಕಾರವು ನೀಡಿರುವ ಮಾರ್ಗಸೂಚಿ ಆಧಾರದ ಮೇಲೆ ಬೇಸಾಯ ಕ್ರಮದ ಬಗ್ಗೆ ಮಾಹಿತಿ ನೀಡುತ್ತದೆ. ಬಿ ಟಿ ಹತ್ತಿ ಬಿತ್ತನೆ ಬೀಜದ ಗುಣಮಟ್ಟ ಕಾಯ್ದುಕೊಳ್ಳುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು. ಬಿ ಟಿ ಹತ್ತಿ ಬಿತ್ತನೆ ಬೀಜ ವಿತರಣೆಯಲ್ಲಿ ಉಂಟಾಗಬಹುದಾದ ಯಾವುದೇ ಕಾನೂನು ಮತ್ತು ಸುವ್ಯವಸ್ಥೆಯನ್ನು, ಸಮಸ್ಯೆಗಳನ್ನು ಜಿಲ್ಲಾಡಳಿತ ನೆರವಿನ ಮೂಲಕ ಕಾಪಾಡುವಲ್ಲಿ ಸಹಾಯ ಮಾಡುತ್ತಿದೆ.

ಪರಿಸರ ಇಲಾಖೆಯು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ರಚಿಸಲಾಗಿರುವ ವಿವಿಧ ಸಮಿತಿಗಳ ಮೂಲಕ ಬಿ ಟಿ ಹತ್ತಿಯ ಬೇಸಾಯದಿಂದ ಪರಿಸರದ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳ ಬಗ್ಗೆ ವಿಶ್ಲೇಷಣೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತಿದೆ.

ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು, ಬಿ ಟಿ ಹತ್ತಿಯನ್ನು ವಿಶ್ವವಿದ್ಯಾಲಯದ ಕ್ಷೇತ್ರಗಳಲ್ಲಿ ಬೆಳೆದ ಅದರ ಸಾಧಕ-ಬಾಧಕಗಳನ್ನು ಪರಿಶೀಲಿಸುವುದಲ್ಲದೆ ರಾಜ್ಯ ಸರ್ಕಾರವು ನೇಮಿಸಿರುವ ಬಿಟಿ ಹತ್ತಿಯ ಸಸಾಮರ್ಥ್ಯ ಹಾಗೂ ಪರಿಣಾಮಗಳ ಬಗ್ಗೆ ವಿಶ್ಲೇಷಿಸಲು ತಾಂತ್ರಿಕವಾಗಿ ನೆರವಾಗುತ್ತಾರೆ.

ಹುಕ್ಕೇರಿ ತಾಲ್ಲೂಕು ಹಿಡಕಲ್ ಜಲಾಶಯದಲ್ಲಿ ಬೃಂದಾವನ ಗಾರ್ಡನ್ ನಿರ್ಮಿಸುವ ಬಗ್ಗೆ

794(937) ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕು ಹಿಡಕಲ್ ಜಲಾಶಯದಲ್ಲಿ "ಬೃಂದಾವನ ಗಾರ್ಡನ್" ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು?